**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ:1056/2024**

**ಸಾಕ್ಷಿಯನ್ನು ದಿಃ 29.08.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಕಾರ್ತಿಕ್ ಬಿ.ಎಸ್ | ಸಿಡಬ್ಲ್ಯೂ:4 | ಪಿಡಬ್ಲ್ಯೂ:3 |
| ತಂದೆಯ ಹೆಸರು | ಶಿವಣ್ಣ | | |
| ವಯಸ್ಸು | 29 ವರ್ಷ | | |
| ಉದ್ಯೋಗ | ಪ್ಯಾಕ್ಟರಿಯಲ್ಲಿ ಕೆಲಸ | | |
| ವಾಸಸ್ಥಳ | ಬನ್ನಿಕುಪ್ಪೆ ಹುಣಸೂರು ತಾಲ್ಲೂಕು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾಗರಾಜು ಎಂಬುವವರು ಯಾರೆಂದು ನನಗೆ ಗೊತ್ತಿಲ್ಲ. ನಿಪಿ. 2 ರ ಸ್ಥಳ ಮಹಜರ್ ನಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ. 2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಮ್ಮ ಊರಿನ ಬನ್ನಿಕುಪ್ಪೆ ಗೇಟ್ ನ ಸ್ವಲ್ಪ ಮುಂದೆ ನಾನು ಪ್ಯಾಕ್ಟರಿಯಲ್ಲಿ ಕೆಲಸ ಮುಗಿಸಿ ಬರುವಾಗ ಪೊಲೀಸರು ಕೇಳಿದಾಗ ಸದರಿ ಸಹಿಯನ್ನು ಮಾಡಿರುತ್ತೇನೆ. ಯಾವ ವಿಚಾರಕ್ಕೆಂದು ವಿಷಯ ತಿಳಿಸಿಲ್ಲ. ಸದರಿ ಸಹಿಯನ್ನು 1 ವರ್ಷದ ಹಿಂದೆ ಮಾಡಿರುತ್ತೇನೆ. ಸಹಿ ಮಾಡುವ ಕಾಲಕ್ಕೆ ಸುಮಾರು ಜನ ಇದ್ದರು ಅವರು ಯಾರು ಯಾರೆಂದು ನನಗೆ ಗೊತ್ತಿಲ್ಲ. ಸಹಿ ಮಾಡಿದಾಗ ಸಮಯ ಬೆಳಿಗ್ಗೆ 11 ರಿಂದ 12 ಆಗಿರಬಹುದು. ನಿಪಿ. 3 ರ ಫೋಟೊದಲ್ಲಿ ಸಾಕ್ಷಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲು ಸಸಅ ರವರಿಂದಃ-**

ಜಡಗನಕೊಪ್ಪಲು ಗೇಟ್ ಹತ್ತಿರ ಅಪಘಾತದ ವಿಚಾರವಾಗಿ ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ನಾನು ಅಲ್ಲಿ ಹಾಜರು ಇದ್ದು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಯಾವ ವಿಚಾರಕ್ಕೆಂದು ನನಗೆ ಗೊತ್ತಿಲ್ಲ, ಅವರು ಸಹಿ ಮಾಡು ಎಂದು ಹೇಳಿದ ಕಾರಣ ಮಾಡಿರುತ್ತೇನೆ. ಆ ದಿನ ದಿಃ 25.05.2024 ಆಗಿತ್ತು ಎಂದರೆ ದಿನಾಂಕ ನನಗೆ ನೆನಪಿಲ್ಲ. ಸಂಜೆ 5 ರಿಂದ 5.45 ವರೆಗೆ ಮಹಜರ್ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ಸಹಿ ಮಾಡಿದ್ದು, ಬೆಳಿಗ್ಗೆ 11 ರಿಂದ 12 ಗಂಟೆ ಆಗಿರಬಹುದು ಎನ್ನುತ್ತಾರೆ. ಆಗ ನನ್ನ ಜೊತೆ ಚಾಸಾ 2 ಮತ್ತು 3 ರವರು ಇದ್ದರು ಎಂದರೆ ಸಾಕ್ಷಿ ನನಗೆ ಅವರು ಯಾರು ಎಂದು ಗೊತ್ತಿಲ್ಲ ಎನ್ನುತ್ತಾರೆ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ, ನನ್ನ ಮುಂದೆ ಅಪಘಾತ ವಿಚಾರವಾಗಿ ಸ್ಥಳ ಮಹಜರ್ ಮಾಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ**

ನಾನು ಜಡಗನಕೊಪ್ಪಲು ಗ್ರಾಮಸ್ಥ ಅಲ್ಲ ಎಂದರೆ ಸರಿ. ಅಲ್ಲಿಂದ ನಮ್ಮ ಊರು ಬನ್ನಿಕುಪ್ಪೆ 1 ಕಿ.ಮೀ ದೂರು ಇದೆ. ಮಹಜರ್ ಗೆ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿದ್ದನ್ನು ಹೊರತು ಪಡಿಸಿ ಅಲ್ಲಿ ಏನು ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದು ಯಾವ ಜಾಗ ಎಂದು ಸಹ ನನಗೆ ಗೊತ್ತಿಲ್ಲ. ಅದರ ಚಕ್ಕುಬಂದಿ ಸಹ ನನಗೆ ಹೇಳಲು ಆಗುವುದಿಲ್ಲ. ಮಹಜರ್ ನಲ್ಲಿ

ಇರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರ ಹೇಳಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ನಾನು ಸ್ಥಳದಲ್ಲಿ ಸಹಿ ಮಾಡಿಲ್ಲ, ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.